ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	74
2.	ಮಾನ್ಯ ಸದಸ್ಯರ ಹೆಸರು	ಶ್ರೀ ಕೆ. ಹರೀಶ್‌ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3.	ಉತ್ತರಿಸಬೇಕಾದ ದಿನಾಂಕ	21/09/2020
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕರೋನಾ ಲಾಕ್ ಡೌನ್ ನಿಂದಾಗಿ ರಾಜ್ಯದಲ್ಲಿ ಆರ್ಥಿಕ ಸಂಕಷ್ಟದ ನಡುವೆ ಹೂವು ಬೆಳೆದ ರೈತರು, ಕ್ಷೌರಿಕರು, ನೇಕಾರರು, ಕುಲಕಸುಬು ಆಧಾರಿತ ಶ್ರಮಿಕರು ಕಟ್ಟಡ ಕಾರ್ಮಿಕರಿಗೆ ಘೋಷಣೆ ಮಾಡಿದ್ದ ಪಾಕೇಜನ್ನು ಎಷ್ಟು ಫಲಾನುಭವಿಗಳು ಪಡೆದಿದ್ದಾರೆ: (ಮಾಹಿತಿ ನೀಡುವುದು).	• ಸರ್ಕಾರದ ಆದೇಶ ಸಂಖ್ಯೆ: CI 49 JAKY 2020 ದಿನಾಂಕ: 26/05/2020 ರನ್ವಯ ರಾಜ್ಯದಲ್ಲಿರುವ 1.25 ಲಕ್ಷ ವಿದ್ಯುತ್ ಚಾಲಿತ ಘಟಕ (ಮಗ್ಗ)ಗಳಲ್ಲಿ ಪ್ರತಿ ವಿದ್ಯುತ್ ಚಾಲಿತ ಘಟಕ (ಮಗ್ಗ)ಗಳಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ಕಾರ್ಮಿಕರಿಗೆ ಮಾತ್ರ ಅನ್ವಯಿಸುವಂತೆ ರೂ.2000/-ಗಳ ಆರ್ಥಿಕ ನೆರವು ನೀಡಿ ಆದೇಶ ಹೊರಡಿಸಲಾಗಿದೆ. ಇದುವರೆವಿಗೆ 44021 ವಿದ್ಯುತ್ ಚಾಲಿತ ಘಟಕ (ಮಗ್ಗ) ಗಳ ಕೂಲಿ ಕೆಲಸಗಾರರು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ. • ಸರ್ಕಾರದ ಆದೇಶ ಸಂಖ್ಯೆ: CI 49 JAKY 2020 ದಿನಾಂಕ: 16/05/2020ರನ್ವಯ 54789 ಕೈಮಗ್ಗ ನೇಕಾರಿಕೆ "ನೇಕಾರ ಸಮ್ಮಾನ್" ಯೋಜನೆಯಡಿ ಯೋಜನೆಯನ್ನು ಘೋಷಿಸುವ ಮೂಲಕ ರೂ. 2,000/-ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮುಖಾಂತರ ನೀಡಲು ಕೆಲವು ಷರತ್ತಿಗೊಳಪಟ್ಟು ಆದೇಶ ಹೊರಡಿಸಿದ್ದು, ಇದುವರೆವಿಗೆ 42887 ಕೈಮಗ್ಗ ನೇಕಾರರು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ. • ಹೂವು ಬೆಳೆದ ರೈತರಿಗೆ ಘೋಷಣೆ ಮಾಡಿದ್ದ ಪ್ಯಾಕೇಜ್‌ನ್ನು ಈವರೆಗೂ ಒಟ್ಟು 20,349 ಫಲಾನುಭವಿಗಳು ಪಡೆದಿರುತ್ತಾರೆ. • ಕಟ್ಟಡ ನಿರ್ಮಾಣ ಕಾರ್ಮಿಕರು, ಅಗಸರು ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವವರಿಗೆ ತಲಾ ರೂ. 5000/-ಗಳ ವಿಶೇಷ ಧನ ಸಹಾಯವನ್ನು ನೀಡಲಾಗಿದೆ. ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕಾರ್ಮಿಕ ವರ್ಗ	ಸೌಲಭ್ಯ ಪಡೆದ ಕಾರ್ಮಿಕರ ಸಂಖ್ಯೆ
1	ಕಟ್ಟಡ ನಿರ್ಮಾಣ ಕಾರ್ಮಿಕರು	16,48,431
2	ಕ್ಷೌರಿಕರು	52,966
3	ಅಗಸರು	61,422

		ಸರ್ಕಾರವು ಘೋಷಿಸಿದ್ದ ಪ್ಯಾಕೇಜ್ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ ಮೂಲಕ ವರ್ಗಾಯಿಸಲಾಗಿದೆ.
(ಆ)	ಕೊರೋನಾ ಲಾಕ್‌ಡೌನ್ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರಿಗೆ ಆಹಾರದ ಕಿಟ್ ಊಟ ಮತ್ತು ಪರಿಹಾರದ ಧನ 5 ಸಾವಿರ ರೂಪಾಯಿಗಳನ್ನು ನೀಡಲಾಗಿದೆಯೇ; ಪ್ರಸ್ತುತ ಎಷ್ಟು ಜನ ಫಲಾನುಭವಿಗಳು ಸದರಿ ಪರಿಹಾರದ ಮೊತ್ತವನ್ನು ಪಡೆದಿರುತ್ತಾರೆ;	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಲಾಕ್‌ಡೌನ್ ಸಂದರ್ಭದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಟ್ಟಡ ಕಾರ್ಮಿಕರು ವಲಸೆ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರಿಗೆ 89,86,533 ಸಿದ್ಧಪಡಿಸಿದ ಆಹಾರ ಪ್ಯಾಕೆಟ್‌ಗಳು 6,08,000 ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಲಾಗಿದೆ. 16,48,431 ನೋಂದಾಯಿತ ಫಲಾನುಭವಿಗಳಿಗೆ ತಲಾ ರೂ. 5,000/- ಗಳಂತೆ ಪರಿಹಾರವನ್ನು ಒದಗಿಸಲಾಗಿರುತ್ತದೆ. [ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ]
(ಇ)	ಕೊರೋನಾ ಲಾಕ್‌ಡೌನ್ ಸಮಯದಲ್ಲಿ ಕಾರ್ಮಿಕರನ್ನು ತಮ್ಮ ತಮ್ಮ ಊರುಗಳಿಗೆ ಕಳುಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು?	ಕೊರೋನಾ ಲಾಕ್‌ಡೌನ್ ಸಮಯದಲ್ಲಿ ಸ್ವಂತ ಊರುಗಳಿಗೆ ಹೋಗಲು ಇಚ್ಛಿಸುವ ಬೇರೆ ಬೇರೆ ರಾಜ್ಯಗಳಿಂದ ಬಂದ ವಲಸ ಕಾರ್ಮಿಕರಿಗೆ ತಮ್ಮ ಹೆಸರುಗಳನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಾಯಿಸಲು ವ್ಯವಸ್ಥೆ ಕಲ್ಪಿಸಲಾಗಿತ್ತು. ಸೇವಾ ಸಿಂಧು ತಂತ್ರಾಂಶದಲ್ಲಿ ನೋಂದಾಯಿಸಿದ ಕಾರ್ಮಿಕರನ್ನು ವಿಶೇಷ ಶ್ರಮಿಕ ರೈಲುಗಳ ಮೂಲಕ ಅವರ ಊರುಗಳಿಗೆ ಉಚಿತವಾಗಿ ಕಳುಹಿಸಲು ಕ್ರಮ ವಹಿಸಲಾಗಿದೆ. ತವರು ರಾಜ್ಯಗಳಿಗೆ ಶ್ರಮಿಕ್ ರೈಲುಗಳ ಮೂಲಕ ಪ್ರಯಾಣಿಸಿದ ವಲಸೆ ಕಾರ್ಮಿಕರು ಮತ್ತು ಅವರ ಜೊತೆಗಿದ್ದ ಕುಟುಂಬದ ಸದಸ್ಯರುಗಳಿಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಸಿದ್ಧಪಡಿಸಿದ ಆಹಾರ, ಮೊಟ್ಟೆ, ಹಣ್ಣು, ನೀರಿನ ಬಾಟಲ್, ಮಜ್ಜಿಗೆ ಹಾಗೂ ಇತರೆ ಆಹಾರ ಪದಾರ್ಥಗಳನ್ನು ಉಚಿತವಾಗಿ ವಿತರಿಸಲಾಗಿರುತ್ತದೆ.

ಕಾಇ 289 ಎಲ್‌ಇಟಿ 2020

19/9/20

(ಅರಬೈಲ್ ಶಿವರಾಂ ಹೆಬ್ಬಾರ್)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಅನುಬಂಧ

ಕೋವಿಡ್-19 ಕಾರಣದಿಂದ ಆರ್ಥಿಕ ಸಂಕಷ್ಟಕ್ಕೊಳಗಾದ ಮಂಡಳಿಯ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ದಿನಾಂಕ: 09-09-2020ರವರೆಗೆ ರೂ. 5000/-ಗಳ ಸಹಾಯಧನ ಪಾವತಿಸಿದ ಜಿಲ್ಲಾವಾರು ವಿವರಗಳು.				
ಕ್ರ.ಸಂ	ಜಿಲ್ಲೆ	ಮಂಡಳಿಯಿಂದ ಡಿಬಿಟಿ ಹಾಗೂ ಆಧಾರ ಮೂಲಕ ಸಹಾಯಧನ ಪಾವತಿಸಿದ ಫಲಾನುಭವಿಗಳ ಸಂಖ್ಯೆ	ಮಂಡಳಿಯಿಂದ ನೆಫ್ಟ್ ಮೂಲಕ ಪಾವತಿಸಿದ ಫಲಾನುಭವಿಗಳ ಸಂಖ್ಯೆ	ಕಾರ್ಮಿಕ ಅಧಿಕಾರಿಗಳ ಮೂಲಕ ಪಾವತಿಸಿದ ಫಲಾನುಭವಿಗಳ ಸಂಖ್ಯೆ
1	ಬಾಗಲಕೋಟೆ	15579	3393	10555
2	ಬೆಳಗಾವಿ	41674	11281	17026
3	ಬಳ್ಳಾರಿ	45372	4036	33433
4	ಬೆಂಗಳೂರು	36357	5378	42032
5	ಬೀದರ	43651	5117	22846
6	ವಿಜಯಪುರ	17613	3773	24239
7	ಚಾಮರಾಜನಗರ	40290	1117	13252
8	ಚಿಕ್ಕಬಳ್ಳಾಪುರ	15980	1031	6735
9	ಚಿಕ್ಕಮಗಳೂರು	19550	9040	6139
10	ಚಿತ್ರದುರ್ಗ	60049	3927	14556
11	ದಾವಣಗೆರೆ	58869	3194	22245
12	ಗದಗ	11999	5102	6748
13	ಹಾಸನ	54320	3401	15182
14	ಹಾವೇರಿ	13247	11138	19991
15	ಧಾರವಾಡ	48299	7813	20973
16	ಕಲಬುರಗಿ	40707	6335	37875
17	ಉತ್ತರ ಕನ್ನಡ	47485	13792	17664
18	ಕೋಲಾರ	44575	726	21288
19	ಕೊಪ್ಪಳ	65794	5757	5348
20	ಕೊಡಗು	951	468	1443
21	ಮಂಡ್ಯ	24824	1643	14622
22	ದಕ್ಷಿಣ ಕನ್ನಡ	35657	7593	13132
23	ಮೈಸೂರು	34030	2852	28120
24	ರಾಯಚೂರು	38789	2080	13279
25	ರಾಮನಗರ	9638	1059	18393
26	ಶಿವಮೊಗ್ಗ	92815	7055	13569
27	ತುಮಕೂರು	23338	2317	15527
28	ಉಡುಪಿ	17430	7409	7759
29	ಯಾದಗಿರಿ	15774	4269	7708
	ಒಟ್ಟು	**10,14,656**	**142096**	**491679**
	ಒಟ್ಟು ಕಾರ್ಮಿಕರು	**16,48,431**		
	ಒಟ್ಟು ವಿತರಿಸಿದ ಮೊತ್ತ	**824,21,55,000**		